ಉಪ್ಪಿನಕಾಯಿ ಅಂಗಡಿಯೊಂದರಲ್ಲಿ ಅತಿಹೆಚ್ಚು ಬೇಡಿಕೆಯಿರುವುದೆ ಕೋಳಿ ಉಪ್ಪಿನಕಾಯಿಗಂತೆ. ಮಾನವನ ನಾಲಗೆಯ ರಸಾಸ್ವಾದ ಇಲ್ಲಿಗೆ ನಿಂತಿಲ್ಲ. ಈಚಿನ ವರದಿಯೊಂದು ಸೂಚಿಸುವಂತೆ ಚಿಕನ್ ಮಸಾಲೆದೋಸೆ ಜನಪ್ರಿಯವಾಗಿದೆಯಂತೆ.

ಇಷ್ಟೆ ಅಲ್ಲ, ಆಧುನಿಕ ಮಾನವರ ಇಚ್ಛೆಯಂತೆ ತನ್ನ ಸ್ವರೂಪದಲ್ಲಿ ಬದಲಾಗುತ್ತ ಬಂದ ಹೆಗ್ಗಳಿಕೆ ಕೋಳಿಮಾಂಸದ್ದು. ನಾನಾಬಗೆಯ ಚಿಕನ್‌ರೋಲ್, ಚಿಕನ್‌ನೂಡಲ್ಸ್, ಚಿಕನ್‌ಮಂಚೂರಿ, ಚಿಕನ್ ಫ್ರೈಡ್‌ರೈಸ್ ಹೀಗೆ ನಾನಾವತಾರದಲ್ಲಿ ಮಕ್ಕಳು, ಯುವಜನಾಂಗದ ಮೆಚ್ಚುಗೆಗೆ ಪಾತ್ರವಾಗಿದೆ. ಈ ರೀತಿಯ ಬಹುರೂಪತೆ ಬೇರೆ ಯಾವ ಆಹಾರಕ್ಕಿದೆ? ಎಂದು ಪ್ರಶ್ನಿಸಿಕೊಂಡರೆ ನಿಮಗೆ ಕೋಳಿಯ ಮಹಿಮೆ ತುಸುವಾದರೂ ತಿಳಿದೀತು. ವಿಶ್ವಮಾನ್ಯತೆಗೊಳಗಾದ ಆಹಾರವೆಂಬ ಗರಿ ಇದರ ಮುಕುಟದಲ್ಲಿದೆ. ಜಗತ್ತಿನ ಯಾವ ಭಾಗಕ್ಕೆ ಬೇಕಾದರೂ ಹೋಗಿ, ಕೋಳಿಮಾಂಸದಿಂದ ತಯಾರಿಸಿದ ಖಾದ್ಯ ದೊರೆಯುತ್ತದೆ. ಭಾಷೆ, ಸಂಸ್ಕೃತಿ, ಉಡುಪು, ಬಣ್ಣ ಆಹಾರ ಹೀಗೆ ಎಷ್ಟೇ ಭಿನ್ನತೆಯಿದ್ದರೂ, ನಮ್ಮ ಕವಿ ಕುವೆಂಪು ಹೇಳುವ 'ವಿಶ್ವಮಾನವತೆ'ಯನ್ನು ಸಾಕಾರಗೊಳಿಸಿದ ಹೆಗ್ಗಳಿಕೆ ಕೋಳಿಯದು. ಜಾಗತಿಕ ಮಾನ್ಯತೆಯ ಈ ಪರಿಯ ಸೊಬಗು ಬೇರಾವ ಆಹಾರದಲ್ಲೂ ಇಲ್ಲ.

ಮೇಲೆ ವಿವರಿಸಿದ ಆಹಾರ ಪದ್ಧತಿಯಾಗಷ್ಟೆ ಅಲ್ಲ, ಕೋಳಿಯು ಜನಪದ ಆರಾಧನಾ ಪರಂಪರೆಯ ಭಾಗವೂ ಹೌದು. ಮಕರ ಸಂಕ್ರಾಂತಿಯ ನಂತರ ಕರಾವಳಿಯ ಎಲ್ಲ ದೆಯ್ಯದ (ದೈವದ) ಮನೆಯ ಬಾಗಿಲುಗಳು ತೆರೆಯುತ್ತವೆ. ದೈವದ ನೇಮ, ಹಾಲುಹಬ್ಬ, ಕೋಲ, ಗೆಂಡ ಹೀಗೆ ಆಚರಣೆಗಳ ಪರ್ವವೇ ಆರಂಭವಾಗುತ್ತದೆ. ಈ ಆಚರಣೆಗಳ ನಂತರ ಕೋಳಿಯ ರಕ್ತ ಧರೆಗೆ ಬೀಳಬೇಕೆಂಬ ನಂಬಿಕೆಯಿದೆ. ಈ ನಂಬಿಕೆಯೆ ಕೋಳಿ ಅಂಕ ನಡೆಯಲು ರಹದಾರಿಯಾಗಿದೆ. ಕಾನೂನಿನ ದೃಷ್ಟಿಯಲ್ಲಿ ಕೋಳಿ ಅಂಕವು ಅಪರಾಧ ಕೃತ್ಯ. ಹಾಗಾಗಿ ಇದು ನಿಷೇಧಿಸಲ್ಪಟ್ಟಿದೆ. ಜನರ ನಂಬಿಕೆಯ ಭಾಗವಾದ ಈ ಆಚರಣೆಯು ಕದ್ದುಮುಚ್ಚಿಯೊ, ಪೊಲೀಸರ ಮೌಖಿಕ (ಅ)ಸಮ್ಮತಿಯ ಮೇರೆಗೊ ಅಂತು ನಡೆಯಲೇಬೇಕು. ಕೋಳಿ ಅಂಕಕ್ಕಾಗಿ ಕೋಳಿಯನ್ನು ಸಾಕುವ ರೀತಿಯನ್ನು ಗಮನಿಸಬೇಕು. ಅದು ಯಾವ ಕಂಬಳದ ಕೋಣದ ಆರೈಕೆಗೂ ಕಮ್ಮಿಯೇನಲ್ಲ. ಕುಸ್ತಿಗೆ ಸಿದ್ಧವಾಗುವ ಜಟ್ಟಿಯ ಹಾಗೆ ಅಂಕಕ್ಕೆ ಸಿದ್ಧವಾಗುವುದು. ಕ್ರಿಕೆಟಿನಂತಹ ಕ್ರೀಡೆಗೆ ಇರುವಷ್ಟೆ ಪ್ರೇಕ್ಷಕ ಸಮೂಹವು ಕೋಳಿ ಅಂಕಕ್ಕೂ ಇದೆ.

ಈ ಪ್ರೇಕ್ಷಕ ಸಂತತಿಯೆ ಕುಂದಾಪುರದ ಸಂತೆಯಲ್ಲಿ ಕೋಳಿಯ ಸುತ್ತ ನೆರೆದಿರುವುದು. ಚುಟುಕು ಕ್ರಿಕೆಟ್‌ನ ಐಪಿಎಲ್ ತಂಡಕ್ಕೆ ಮಾಲೀಕರು ಇರುವ ಹಾಗೆ ಕೋಳಿ ಅಂಕಕ್ಕೆ ಕೋಳಿಯನ್ನು ಭಾರೀ ಬೆಲೆಗೆ ಕೊಳ್ಳುವ ಮಾಲೀಕರು ಇದ್ದಾರೆ. ಐಪಿಎಲ್ ಮಾಲೀಕರು ತಮ್ಮ ತಂಡಕ್ಕೆ ಅಗತ್ಯವಾದ ಆಟಗಾರರನ್ನು ಕೋಚ್‌ಗಳ ಸಲಹೆಯನುಸಾರ ಆಯ್ದುಕೊಳ್ಳುತ್ತಾರೊ, ಹಾಗೆ ಇಲ್ಲಿ ಸಂತೆಯಲ್ಲಿಯೂ ಸಹ ಕೋಳಿ ಅಂಕದ ಪರಿಣತರ ಮಾತಿನ ಅನುಸಾರವೇ ಮಾಲೀಕ ಕೋಳಿಯನ್ನು ಖರೀದಿಸುವನು. ಖರೀದಿಯಲ್ಲಿ ಕೋಳಿಯ ಬಣ್ಣ, ಎತ್ತರ, ನಿಲುವು, ಅದರ ಠೀವಿಗಳೆಲ್ಲವೂ ಮಾಲೀಕನ ಕೊಳ್ಳುವಿಕೆಯನ್ನು ಪ್ರಭಾವಿಸುತ್ತವೆ. ಕೋಳಿ ಅಂಕ ನಡೆಯುವ ದಿನವನ್ನು ಆಧರಿಸಿ ಆದಿನ ಯಾವ ವರ್ಣದ ಕೋಳಿಗೆ ಗೆಲುವು ಎಂದು ಹೇಳುವ ಪಂಚಾಂಗವಿದೆ. ಈ ಪಂಚಾಂಗ ಸತ್ಯವೋ ಸುಳ್ಳೋ ಎಂಬ ವೈಜ್ಞಾನಿಕ ದೃಷ್ಟಿಗೆ ಇಲ್ಲಿ ಜಾಗವಿಲ್ಲ. ಪಂಚಾಂಗದ ಕುರಿತು ಅತೀವವಾದ ಶ್ರದ್ಧೆ, ನಂಬಿಕೆ ಇಲ್ಲಿದೆ. ಪಂಚಾಂಗದ ನಿರ್ದೇಶನವನ್ನು ಪಾಲಿಸದಿದ್ದರೆ ಸೋಲು ಶತಸಿದ್ಧ ಎಂಬುದು ಕರಾವಳಿಯಲ್ಲಿ ಜನಜನಿತ. ಪಂಚಾಂಗ ಅನುಸರಿಸಿಯೂ ಸೋತರೆ ಅದಕ್ಕೆ ಬೇರೆಯದೇ ಕಾರಣಗಳನ್ನು ಹುಡುಕಲಾಗುವುದು. ಆದರೆ ಪಂಚಾಂಗವನ್ನು ದೂಷಿಸುವುದಿಲ್ಲ. ಅವರಿಗೆ ಆ ಪಂಚಾಂಗವು ಅಷ್ಟು ಪವಿತ್ರವಾದದ್ದು!

ಕೋಳಿ ಅಂಕಕ್ಕೂ ಪಂಚಾಂಗವೆ ಎಂದು ವಿಸ್ಮಿತರಾಗಬೇಡಿ. ಕೋಳಿಯ ಗೆಲುವಿನಲ್ಲಿ ಪಂಚಾಂಗದಷ್ಟೆ